doc-383
T:P-2

Reg b G No.155 4 - 10 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ವಿಜ್ಞಾಪನೆಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ್ಯೆಸೆ

ಭಾರತದ 4 ನೇ ಯೋಜನೆಗೆ 5 ಸಹಸ್ರ ಮಿಲಿಯ ಡಾಲರ್

ಸತ್ಯವಾದಿಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವನನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ಸ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸಕ್ಕರೆ ವಶ

ಬೆಂಗಳೂರು— ಕೇರಳ ಗಡಿಯಲ್ಲಿ ಪಟ್ಟಲ್ ಹತ್ತಿರ-ಕೇರಳಕ್ಕೆ ಸಾಗಿಸಲಾಗುತ್ತಿದ್ದ ರೂ. 29000 ಬೆಲೆಯ 90 ಕ್ವಿಂಟಾಲ್ ಸಕ್ಕರೆಯನ್ನು ಸಿ ಐ ಡಿ ಆಹಾರ ಶಾಖೆಯವರು ವಶಪಡಿಸಿಕೊಂಡರು.

★

ದಿವ್ಯವಾಣಿ

ಸತ್ಯಾಗ್ರಹವೆಂದರೆ ಸತ್ಯಕ್ಕಾಗಿ ನಡೆಸಿದ ಅವಿರತ ಶೋಧನೆ ಯಾಗೂ ಅದನ್ನು ಸಾಧಿಸಲು ಮಾಡಿದ ದೃಢಸಂಕಲ್ಪ.

— ಮಹಾತ್ಮಾ ಗಾಂಧಿ

●

ಮಹಾರ್ಜ ತೀರ್ಪು

ಬೆಳಗಾಂ— ಮಹಾಜನ ತೀರ್ಪನ್ನು ಕಟ್ಟಕಡೆಯದೆಂದು ಭಾವಿಸಬೇಕೆಂದೂ ಮೈಸೂರು–ಮಹಾರಾಷ್ಟ್ರ ಗಡಿ ವ್ಯಾಜ್ಯವನ್ನು ಮತ್ತೆ ಯಾವ ರೀತಿಯಲ್ಲೂ ಎತ್ತಬಾರದೆಂದೂ ಭಾರತ ಸರಕಾರವನ್ನು ಬೆಳಗಾಂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಒತ್ತಾಯ ಮಾಡಿರುವರು.

★

ಮಿಲಿಟರಿ ಅಧಿಕಾರ

ಪೆರುವಿನ ಅಧ್ಯಕ್ಷ ಫರ್ನಾಂಡೋರನ್ನು ಪದಚ್ಯುತಗೊಳಿಸಿ, ಮಿಲಿಟರಿ ತಂಡವು ಪೆರೂವಿನ ಆಡಳಿತ ವಶಪಡಿಸಿಕೊಂಡಿದೆ.

★

ಪೌರಚುನಾವಣೆ

ಮದರಾಸು— ಪೌರಚುನಾವಣೆಯಲ್ಲಿ 120 ಸ್ಥಾನಗಳಲ್ಲಿ 96 ಕ್ಕೆ ಡಿಎಂಕೆ ಸ್ಪರ್ಧಿಸುವದು : ಮಿಕ್ಕ 24 ಕ್ಕೆ ಡಿಎಂಕೆ ಮೈತ್ರಿ ಪಕ್ಷಗಳಾದ ಮುಸ್ಲಿಂಲೀಗ್ ಮತ್ತು ಸ್ವತಂತ್ರ ಪಕ್ಷ ಸ್ಪರ್ಧಿಸುವದು.

★

6 ಮಕ್ಕಳನ್ನು ಹೆತ್ತಳು

ಬರ್ಮಿಂಗಹ್ಯಾಂ— ಇಲ್ಲಿಯ ಹೆರಿಗೆ ಆಸ್ಪತ್ರೆಯಲ್ಲಿ 30 ವರ್ಷದ ಸುಹಿಳೆಯೊಬ್ಬಳು 6 ಮಕ್ಕಳನ್ನು ಹೆತ್ತಳು.

○

ಚಳವಳಿ

ರಾಮನಗರ— ಮಂಚನಬೆಲೆ ಪ್ರಾಜೆಕ್ಟನ್ನು ಕೈಗೊಳ್ಳದಿದ್ದರೆ ಎಸ್ಸೆಸ್ಪಿ ಚಳವಳಿ ಹೂಡುವುದೆಂದು ಹೇಳಲಾಗಿದೆ.

ಕಪ್ಪು ಬಾವುಟ ಪ್ರದರ್ಶನ

ಬರೋಡಾ— ಗಾಂಧಿ ಶತಮಾನೋತ್ಸವ ಸಮಾರಂಭದಲ್ಲಿ ಶ್ರೀಮತಿ ಸುಜೀತ ಕೃಪಾಲಿನಿ ಭಾಷಣ ಮಾಡುವ ನಿರೀಕ್ಷೆ ಇದ್ದುದರಿಂದ ಕಚ್ ತೀರ್ಪು ವಿರುದ್ಧ ಘೋಷಣೆ ಮಾಡುತ್ತಾ ಕೆಲವು ಮಂದಿ ಎಸ್ಸೆಸ್ಪಿ ಸ್ವಯಂಸೇವಕರು ಕಪ್ಪು ಬಾವುಟ ಪ್ರದರ್ಶನ ನಡೆಸಿದರು.

ಹರಿಜನನ ಕೊಲೆ

ವಿಜಯವಾಡ— ಗಾಂಧಿ ಜಯಂತಿ ದಿನದಂದು ಕೆಂಚಿರಚರ್ಲಾ ಗ್ರಾಮದಲ್ಲಿ ಹಾಡುಹಗಲಿನಲ್ಲಿ 55 ವರ್ಷದ ಚಿನ್ನರಾಮುಯ್ಯನೆಂಬುವನು ಕೊಲೆಮಾಡಲ್ಪಟ್ಟನು

★

ಹೊಡೆದೋಡಿಸಲಾಗುವುದು

ವಾಷಿಂಗ್ಟನ್— ಪ್ರೆಸ್ ಕ್ಲಬ್ಬಿನಲ್ಲಿ ಮಾತನಾಡುತ್ತಾ, ಭಾರತದ ಉತ್ತರ-ಪ್ರದೇಶಗಳಲ್ಲಿ ಆಕ್ರಮಣ ಮಾಡಿರುವ ಚೀನೀ ಪಡೆಗಳು, ಒಪ್ಪಂದರೀತ್ಯಾ ಸ್ಥಳ ತ್ಯಜಿಸದಿದ್ದರೆ ಹೊಡೆದೋಡಿಸಲಾಗುವದೆಂದು, ಭಾರತ ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರವರು ಹೇಳಿದರು.

★

ಸವರ್ಣ ಹಿಂದು – ಹರಿಜ ಮದುವೆ

ಹೈದರಾಬಾದು— ಒಬ್ಬ ಸವರ್ಣ ಹಿಂದೂ ಪದವೀಧರನು ಆಂಧ್ರ ಮಹಿಳಾ ವಿದ್ಯಾಲಯದ ಒಬ್ಬಳು ಹರಿಜನ ಹುಡುಗಿಯನ್ನು ಆರ್ಯಸಮಾಜ ರೀತ್ಯಾ ಮದುವೆಯಾದನು. ಮುಖ್ಯಮಂತ್ರಿಗಳು ಇಬ್ಬರ ಕೊರಳಿಗೂ ಒಟ್ಟು ಒಂದು ಹಾರ ಹಾಕಿದರು.

ನಾಲ್ಕನೇ ಯೋಜನೆಗೆ

ನವದೆಹಲಿ— ನಾಲ್ಕನೇ ಯೋಜನೆಗೆ 5000 ಮಿಲಿಯ ಡಾಲರು ನೆರವು ಆವಶ್ಯಕವೆಂದು ಪ್ಲಾನಿಂಗು ಕಮಿಷನ್ನಿನ ನಿಪುಣರ ಅಭಿಪ್ರಾಯವಾಗಿದೆ.

○

ಹಿಂದೂ – ಮುಸ್ಲಿಂ

ಜಮ್ಮು— ಇಲ್ಲಿಗೆ 100 ಮೈಲಿ ದೂರದ ರಾಜೌರಿ ಗಡಿ ಪಟ್ಟಣದಲ್ಲಿ ಜಾತ್ಯಾತೀತದ ಒಳ್ಳೆ ಉದಾಹರಣೆ ಕಾಣಬಂದಿತು – ಪಟ್ಟಣದ ಜೂಲಾ ಸೇತುವೆ ಹತ್ತಿರ ನಡೆದ ಒಂದು ಕರುವಿನ ವಧೆಯನ್ನು ಪ್ರತಿಭಟಿಸಿ ಹಿಂದೂಗಳು ನಡೆಸಿದ ಮೆರವಣಿಗೆಯಲ್ಲಿ ಮುಸ್ಲಿಂರೂ ಭಾಗವಹಿಸಿದ್ದರು.

●

ವಿಶ್ವವಿದ್ಯಾಲಯದಲ್ಲಿ ಹೊಸಸಂಪ್ರದಾಯ

ರಾಜಕೋಟೆ— ಸೌರಾಷ್ಟ್ರ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಕುಲಪತಿ ಮತ್ತು ಉಪಕುಲಪತಿಗಳು ಸಾಂಪ್ರದಾಯಿಕ ಕಪ್ಪು ಗೌನು ಬದಲು ಅಲಂಕೃತ ಖಾದಿ ದುಪ್ಪಟ ಧರಿಸಿದ್ದರು. ಸಾಂಪ್ರದಾಯಕ ಉಡುಪನ್ನು ತ್ಯಜಿಸಿದ ಪ್ರಥಮ ವಿಶ್ವವಿದ್ಯಾಲಯವಿದು.

●

ಕಲ್ಲು ಚಪ್ಪಲಿ ಎಸೆತ

ಬೆಳಗಾಂ— ಮಹಾರಾಷ್ಟ್ರ ಪರದ ಗುಂಪು ಭಾರತ ಗೃಹಮಂತ್ರಿ ಚವನರ ಕಾರಿನ ಮೇಲೆ ಕಲ್ಲು ಚಪ್ಪಲಿಗಳನ್ನು ಎಸೆದರು – ಮಂತ್ರಿಗಳಿಗೆ ಏನೂ ತೊಂದರೆಯಾಗಲಿಲ್ಲ ಕಾರಿಗೆ ಸ್ವಲ್ಪ ಡ್ಯಾಮೇಜಾಯಿತು.

●

ಗಡಿ ವ್ಯಾಜ್ಯ

ಬೆಳಗಾಂ— ಬಹಳ ಜಾಗರೂಕತೆಯ ಪರ್ಯಾಲೋಚನಾನಂತರ ಮೈಸೂರು – ಮಹಾರಾಷ್ಟ್ರ ಗಡಿ ವ್ಯಾಜ್ಯ ಬಗ್ಗೆ ಕೇಂದ್ರವು ನಿರ್ಧಾರ ಕೈಗೊಳ್ಳುವದೆಂದು ಗೃಹಮಂತ್ರಿ ಚವಣರು ಹೇಳಿದರು.

ಹಿಂದೂಗಳ ಆಚಾರ

ಸಂಗ್ರಾಹಕರು— ' ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ನಿವೇದನಮಾಡುವ ಕ್ರಮದಲ್ಲಿ ಅನೇಕ ವಿಧಿಗಳಿವೆ. ವಿಗ್ರಹಗಳು, ಸಾಲಿಗ್ರಾಮ, ಶಿವಲಿಂಗ, ಪಟ ಇತ್ಯಾದಿಗಳನ್ನಿಟ್ಟು ಶಾಸ್ತ್ರೋಕ್ತ ರೀತ್ಯಾ ಪೂಜೆ ಮಾಡಿ ನಂತರ ನಿವೇದನ ಮಾಡುವುದು. ಇದು ಉತ್ತಮವಾದುದು. ಅಷ್ಟು ನುಟ್ಟಿಗೆ ನಡೆಸಲು ಸಾಧ್ಯವಿಲ್ಲದವರು ದೇವರ ಪಟವನ್ನಿಟ್ಟು ಅದರ ಮುಂದೆ ದೀಪಹಚ್ಚಿ ಮಾಡಿರುವ ಅಡಿಗೆಯನ್ನು ಅದರ ಮುಂದೆ ಇಟ್ಟು ನಮಸ್ಕಾರ ಮಾಡುವುದು. ಇದೂ ಸಾಧ್ಯವಾಗದವರು ತಮಗಾಗಿ ಬಡಿಸಿರುವ ಪದಾರ್ಥವನ್ನು, ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡು, ತನ್ನ ಕುಲದೈವವು ಆಂತರ್ಯಾಮಿಯಾಗಿ ತನ್ನ ಶರೀರದಲ್ಲಿ ಇರುವುದಾಗಿ ಭಾವಿಸಿ, ಆ ದೇವರಿಗೆ ತನು ನಿವೇದನ ಮಾಡಿದಂತೆಯೂ, ದೇವರು ಸ್ವೀಕಾರ ಮಾಡಿದಂತೆಯೂ ಭಾವಿಸಿ ನಂತರ ಊಟಮಾಡಬೇಕು.

Help The Gorakshana

SHAKTI SUDHA

A Superb Tonic

Protect the Cow



ಗೋರಕ್ಷಣೆಯನ್ನು ಪ್ರತಿಯೊಬ್ಬರೂ ಕರ್ತವ್ಯವೆಂದು ಭಾವಿಸಿ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ ಜನಪ್ರಿಯತೆ 4ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಲಿಯಗಟ್ಟಿಲೆ ಕೊಪಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್

ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನಪ್ರಿಯ 6ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬಹಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮನ್ಮಾಜ್, ಪ್ರಾಣ್, ಮಹಮೂದ್

Printing — Neat Binding

Lakshminarasimha Press

Sivarampet, Mysore

ಆಶೋಕ ವಿಜೆನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ವೈಟ್‌ಫೀಲ್ಡ್

ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುವವೆ

Golden Jubilee of 'Satyavadi'

The golden jubilee of the ' Satyavadi ' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4